ಹತ್ತು ಹಲವು ವಿದ್ಯೆಗಳ ಮೂಲಕ ಹಣ ಸಂಪಾದಿಸುತ್ತಿದ್ದ. ನವರಂಗಿಗೆ ಮದುವೆಯಾಗಿ ಎರಡು ಪುಟ್ಟಮಕ್ಕಳಿದ್ದವು. ರಂಗಮ್ಮನು ಅವನ ತಂದೆಯ ಕಾಲದಿಂದಲೂ ಅವರ ಅಂಗಡಿಯಲ್ಲಿಯೇ ಮನೆಗೆ ಬೇಕಾದ ದಿನಸಿ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಿದ್ದಳು. ನವರಂಗಿಯೂ ಕೂಡ ರಂಗಮ್ಮನಿಗೆ ತನ್ನ ತಂದೆಯಂತೆ ಅಂಗಡಿಯಲ್ಲಿ ಸಾಲಕೊಡುತ್ತಿದ್ದ. ರಂಗಮ್ಮನಿಗೆ ಹಣ ದೊರಕಿದಾಗ ತಂದು ಸಾಲ ತೀರಿಸುತ್ತಿದ್ದಳು. ಈತನೂ ಪಕ್ಕದ ಮನೆಯ ಶಾರದಮ್ಮಳಂತೆ ರಂಗಮ್ಮನ ಕುಟುಂಬಕ್ಕೆ ಬಹಳ ಆತ್ಮೀಯನಾಗಿದ್ದನು.

'ಸೌಮ್ಯ ಸ್ಕೂಲಿಗೆ ಹೋಗ್ತಾ ಇಲ್ವಾ? ಇತ್ತೀಚಿಗೆ ಕಾಣಿಸ್ತಿಲ್ಲಾ. ಆವತ್ತು ಬಸ್ಸಿನಲ್ಲಿ ಪ್ರಜ್ಞೆ ತಪ್ಪಿ ಬಿದ್ದನಂತರ ಮತ್ತೆ ಹುಷಾರಾಗಿಲ್ವಾ?' ಎಂದ ನವರಂಗಿಗೆ, 'ಏನ್ ಮಾಡೋದು, ನನ್ನ ಗ್ರಾಚಾರ ನೆಟ್ಟಗಿಲ್ಲ. ಇನ್ನೂ ಅವಳು ಪೂರ್ತಿ ಹುಷಾರಾಗಿಲ್ಲ' ಎಂದಳು ಕಣ್ಣೀರಿಡುತ್ತಾ ರಂಗಮ್ಮ. 'ಚಿಂತೆ ಮಾಡಬೇಡ ರಂಗಮ್ಮ. ಅವಳ ಕುಂಡಲಿ, ಜಾತಕ ಏನಾದ್ರೂ ಇದ್ರೆ ತಗೊಂಡು ನಾಳೆ ಮನೆಯ ಹತ್ರ ಬಾ, ಎಲ್ಲಾ ಸರಿ ಮಾಡೋಣ' ಎಂದ. ಬೇಡವೆಂದರೂ ಕೇಳದೆ ನವರಂಗಿಯೇ ರಂಗಮ್ಮಳ ಟಿಕೇಟ್ ತೆಗೆದುಕೊಂಡ.

ರಂಗಮ್ಮನು ಸ್ಕೂಲಿಗೆ ಬಂದು ವಿಚಾರಿಸಿದಾಗ, ಅಲ್ಲಿ ಯಾರೂ ಅವಳಿಗೆ ಅಂತಹ ಒತ್ತಡವನ್ನಾಗಲೀ, ತೊಂದರೆಯನ್ನಾಗಲೀ ಕೊಟ್ಟಿಲ್ಲವೆಂದು ತಿಳಿಯಿತು. ಮೇಷ್ಟ್ರುಗಳಿಗೂ ಸೌಮ್ಯ ಶಾಲೆಗೆ ಬರಲಾಗುತ್ತಿಲ್ಲವೆಂದು ಕೇಳಿ ಬೇಜಾರಾಗಿತ್ತು. 'ಆದಷ್ಟು ಬೇಗ ಸೌಮ್ಯ ಹುಷಾರಾಗಿ, ಶಾಲೆಗೆ ಬರುವಂತಾಗಲಿ. ಅವಳು ನಮ್ಮ ಶಾಲೆಗೇ ಒಂದು ಕೀರ್ತಿ ಕಳಸ' ಎಂದು ಶಾಲೆಯ ಮುಖ್ಯೋಪಾಧ್ಯಾಯರು ಸೌಮ್ಯಳನ್ನು ಹೊಗಳಿದರು.

ಮನೆಗೆ ಬರುವಾಗ ಮಗಳಿಗೆ ಇಷ್ಟವೆಂದು ರಂಗಮ್ಮ ಕೊಬ್ಬರಿ ಮಿಠಾಯಿ ಕಟ್ಟಿಸಿಕೊಂಡು ಬಂದಳು. ರಾತ್ರಿಯ ಊಟವಾದ ಮೇಲೆ ಮಿಠಾಯಿ ಕೊಟ್ಟು, ಹಾಸಿಗೆ ಹಾಕಿ ಮಲಗಲು ರೆಡಿಯಾದ ಮಗಳ ಹತ್ತಿರ ಕುಳಿತು ಪ್ರೀತಿಯಿಂದ ಮಾತನಾಡತೊಡಗಿದಳು. ತಾನು ಮದುವೆಯಾಗಿ ಈ ಊರಿಗೆ ಬಂದಾಗಿನಿಂದ ಅನುಭವಿಸಿದ ಕಷ್ಟಗಳನ್ನು ಮಗಳಿಗೆ ಪುನರಾವರ್ತನೆಯಾದರೂ ಚಿಂತೆಯಿಲ್ಲವೆಂದು ನೂರೊಂದನೇ ಬಾರಿ ವಿವರವಾಗಿ ಮತ್ತೊಮ್ಮೆ ಹೇಳಿದಳು.

'ನಮ್ಮಿಬ್ಬರ ಭವಿಷ್ಯಾನೂ ನಿನ್ನ ಕೈನಲ್ಲಿ ಐತೆ ಕಣವ್ವ. ನಿನ್ನ ಓದು ಮಾತ್ರ ನನ್ನ ಕಣ್ಣೀರು, ಬೆವರು ಒರೆಸುತ್ತೆ. ನಿನ್ನ ಮ್ಯಾಲೆ ಬಾಳಾ ಆಸೆ ಇಟ್ಕೊಂಡಿದೀನಿ. ಇಷ್ಟು ವರ್ಷ ಎಷ್ಟು ಚೆನ್ನಾಗಿ ಓದ್ತಾ ಇದ್ದೋಳಿಗೆ ಈಗ ಇದ್ದಕ್ಕಿದ್ದಂತೆ ಏನಾಯ್ತುವ್ವ? ಯಾಕೆ ಹಿಂಗಾದೆ ನನ್ನ ಕಂದ? ಮನಸಲ್ಲಿ ಏನಾದ್ರೂ ಇಟ್ಕೊಂಡಿದ್ರೆ ನನ್ನ ಹತ್ರ ಹೇಳು' ಎಂದು ರಂಗಮ್ಮ ಒಂದೇ ಸಮನೇ ಮೆಲುದನಿಯಲ್ಲಿ ಏನೇನೋ ಬಡಬಡಿಸುತ್ತಾ ಕುಳಿತಿದ್ದಳು. ಎಂದಿನಂತೆ ಏನೂ ಮಾತನಾಡದೆ ಮೌನಕ್ಕೆ ಜಾರಿದ ಸೌಮ್ಯ, ತಾಯಿಯ ಮಾತುಗಳನ್ನು ಕೇಳುತ್ತಾ ಹಾಗೆಯೇ ನಿದ್ರೆಹೋದಳು.

ರಂಗಮ್ಮನು ಗತಿಸಿದ ಘಟನೆಗಳನ್ನು ಮೆಲುಕು ಹಾಕುತ್ತಾ, ನಿದ್ರಿಸುತ್ತಿದ್ದ ಮಗಳ ಮುದ್ದಾದ ಮುಖವನ್ನೇ ನೋಡುತ್ತಾ ಯೋಚಿಸುತ್ತಾ ಕುಳಿತಿದ್ದಳು. ಮದುವೆಯಾಗಿ ಊರಿಗೆ ಬಂದಾಗಿನಿಂದ ಕೆಲವರು ಅವಳಿಗೆ ಹಲವು ರೀತಿ ತೊಂದರೆ ಕೊಟ್ಟರೂ ಹೆದರದೆ, ಎಲ್ಲವನ್ನು ಸವಾಲಾಗಿ ಸ್ವೀಕರಿಸಿ ದಿಟ್ಟವಾಗಿ ಎದುರಿಸಿ, ವೈರಿಗಳನ್ನು ಸದೆಬಡಿದಿದ್ದಳು. ಅವಳ ಯೋಚನಾಲಹರಿ ಮತ್ತು ಬುದ್ಧಿಯು, ವೈರಿಗಳು ಎಣಿಸಿದ್ದಕ್ಕಿಂತ ತೀಕ್ಷ್ಣವಾಗಿತ್ತು. ಹಾಗಾಗಿ ಅವರನ್ನೆಲ್ಲಾ ತನ್ನ ಬುದ್ಧಿಬಲ, ಬಾಯಿಬಲದಿಂದಲೇ ಮಣ್ಣುಮುಕ್ಕಿಸಿದ್ದಳು. ಅಷ್ಟಲ್ಲದಿದ್ದರೆ ಊರ ಉಡಾಳ ಗಂಡಸರ ಹಿಡಿತಕ್ಕೆ ಸಿಲುಕದೆ, ಹರೆಯದ ಒಂಟಿ ಹೆಂಗಸೊಬ್ಬಳು ಊರಿನಲ್ಲಿ ತನಗಾಗಿ ಮತ್ತು ತನ್ನ ಕಂದನಿಗಾಗಿ ಬದುಕು ಕಟ್ಟಿಕೊಳ್ಳುವುದು ಅಷ್ಟು ಸುಲಭವಿರಲಿಲ್ಲ. ಆದರೆ ಆಗ ಪಡೆದ ವಿಜಯ ಈಗ ಮಗಳ ವಿಷಯದಲ್ಲಿ ಸಿಗುತ್ತಿಲ್ಲವೆಂಬ ಹತಾಶೆ ರಂಗಮ್ಮನನ್ನು ಬಾಧಿಸುತ್ತಿತ್ತು. ಆಗ ತನ್ನೆದುರಿಗೆ ವೈರಿಗಳಿದ್ದರು. ಆದರೆ ಇಲ್ಲಿ ವೈರಿ ಅದೃಶ್ಯ. ಯಾರೊಂದಿಗೆ ಹೋರಾಡುವುದು? ತನ್ನ

